*(2 ನೇ ಆರೋಪಿಯು ನ್ಯಾಯಾಂಗ ಬಂಧನದಲ್ಲಿದ್ದು, ಆಕೆಯನ್ನು ಈ ದಿನ **Google meet** ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಎಂದು ಖಾತ್ರಿಪಡಿಸಿಕೊಳ್ಳಲಾಯಿತು.)*

ದಿನಾಂಕಃ 19-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀ ಸವಾಲುಃ 1 ನೇ ಆರೋಪಿಯ ಪರವಾಗಿ ಶ್ರೀ ಹೆಚ್.ಸಿ.ಎನ್. ವಕೀಲರಿಂದಃ –**

9. ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಿಮ್ಮ ಮಗಳು ಪೂರ್ಣಿಮ ಯಾವ ದಿನಾಂಕದಂದು ತೀರಿಕೊಂಡಳು ಎಂದು ನಿಮಗೆ ಹೇಳಲು ಆಗುವುದಿಲ್ಲ ಎಂದರೆ ಸಾಕ್ಷಿ ಆಕೆ ಮೃತಪಟ್ಟಿದ್ದು ದಿಃ 07-03-2021 ರಂದು ಎನ್ನುತ್ತಾರೆ. ಆ ದಿನ ಬೆಳಿಗ್ಗೆ ನಾನು ಜಾವಗಲ್ ಸಂತೆಗೆ ವ್ಯಾಪಾರ ಮಾಡಲು ಹೋಗಿದ್ದೆನು. ನಿಮಗೆ ಕನ್ನಡ ಭಾಷೆಯಲ್ಲಿ ಬರೆಯಲು ಮತ್ತು ಓದಲು ಬರುತ್ತದೆ ಎಂದರೆ ಸರಿ. ನಿಪಿ.1 ದೂರನ್ನು ಸಾಕ್ಷಿಗೆ ತೋರಿಸಿ ಅದರಲ್ಲಿರುವ ಬರವಣಿಗೆ ಯಾರದ್ದು ಎಂದು ಕೇಳಲಾಗಿ ಸಾಕ್ಷಿ ನನಗೆ ಗೊತ್ತಾಗುತ್ತಿಲ್ಲ ಎನ್ನುತ್ತಾರೆ. ಅದರಲ್ಲಿ ಏನು ಬರೆದಿದೆ ಎಂದು ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿ ಈಗ್ಗೆ 5 ವರ್ಷಗಳಾಗಿವೆ ಹೇಗೆ ಗೊತ್ತಿರುತ್ತದೆ ಓದಿ ಹೇಳಬಹುದು ಎನ್ನುತ್ತಾರೆ.

10. ಫ್ರಾಸಾ.5, 6 ಮತ್ತು ಚಾಸಾ.14 ರವರು ನಿಮ್ಮ ಗ್ರಾಮದವರು, ನಿಮ್ಮ ಸ್ನೇಹಿತರು ಮತ್ತು ಆತ್ಮೀಯರು ಎಂದರೆ ಸರಿ. ನಿಮ್ಮ ತಾಯಿ ಮತ್ತು ಹೆಂಡತಿಯ ನಡುವೆ ಜಗಳವಾಗಿದ್ದರಿಂದ ನಿಮ್ಮ ತಾಯಿ ಬೇರೆ ಮನೆಯಲ್ಲಿ ವಾಸವಾಗಿದ್ದಾರೆ ಎಂದರೆ ಸಾಕ್ಷಿ ನನ್ನ ತಾಯಿ ನನ್ನ ಅಣ್ಣನ ಜೊತೆ ವಾಸವಾಗಿದ್ದಾರೆ ಆದರೆ ನಮ್ಮ ನಡುವೆ ಯಾವುದೇ ಜಗಳವಾಗಿಲ್ಲ ಎನ್ನುತ್ತಾರೆ. ನಿಮ್ಮ ತಾಯಿ ಮೊದಲಿಗೆ ನಿಮ್ಮ ಜೊತೆ ವಾಸವಾಗಿದ್ದರು ಎಂದರೆ ಸರಿ. ಆಗಿದ್ದಲ್ಲಿ ನಿಮ್ಮ ತಾಯಿ ಯಾವ ಕಾರಣಕ್ಕೆ ನಿಮ್ಮ ಅಣ್ಣನೊಂದಿಗೆ ಹೋದರು ಎಂದರೆ ಸಾಕ್ಷಿ ನನ್ನ ಅಣ್ಣ ಹೊಸದಾಗಿ ಮನೆ ಕಟ್ಟಿದ್ದರಿಂದ ಆಕೆ ಅಲ್ಲಿಗೆ ಹೋದರು ಎನ್ನುತ್ತಾರೆ. ನಿಮ್ಮ ಹೆಂಡತಿಯೊಂದಿಗೆ ಜಗಳ ಮಾಡಿಕೊಂಡು ನಿಮ್ಮ ತಾಯಿ ಅಲ್ಲಿಗೆ ಹೋಗಿದ್ದಾರೆ ಎಂದರೆ ಸರಿಯಲ್ಲ. ನಿಮ್ಮ ತಾಯಿ ನಿಮ್ಮ ಮನೆಯಿಂದ ನಿಮ್ಮ ಅಣ್ಣನ ಮನೆಗೆ ಹೋಗುವವರೆಗೂ ಆಕೆಯ ಮತ್ತು ನಿಮ್ಮ ಹೆಂಡತಿಯ ಸಂಬಂಧ ಚೆನ್ನಾಗಿತ್ತೇ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ.

11. 1 ನೇ ಆರೋಪಿ ಮತ್ತು ನಿಮ್ಮ ನಡುವೆ ಮೊದಲಿನಿಂದಲೂ ಮಾತುಕತೆ ಇರಲಿಲ್ಲ ಎಂದರೆ ಸರಿ. ನಮ್ಮ ಮತ್ತು 1 ನೇ ಆರೋಪಿಯ ಮನೆಯ ನಡುವೆ ಎರಡು ಮನೆಗಳಿವೆ. 1 ನೇ ಆರೋಪಿ ಏನು ಕೆಲಸ ಮಾಡಿಕೊಂಡಿದ್ದಾನೆ ಎಂದು ನನಗೆ ಮಾಹಿತಿ ಇಲ್ಲ. 1 ನೇ ಆರೋಪಿ ನಮ್ಮ ಮನೆಗೆ ಬಂದು ಹೋಗುತ್ತಿರಲಿಲ್ಲ ಮತ್ತು ನಮ್ಮ ನಡುವೆ ಮಾತುಕತೆ ಇರಲಿಲ್ಲ.

12. ನಿಮಗೆ ಮದ್ಯವನ್ನು ಸೇವಿಸುವ ಅಭ್ಯಾಸವಿದೆ ಎಂದರೆ ಸರಿ. ನೀವು, ಪ್ರಾಸಾ.5, 6 ಮತ್ತು ಚಾಸಾ.14 ರವರು ಸೇರಿ 1 ನೇ ಆರೋಪಿಯನ್ನು ಕೊಲೆ ಕೇಸಿನಲ್ಲಿ ಸಿಲುಕಿಸಲು ಸಂಚು ರೂಪಿಸಿದ್ದೀರಿ ಎಂದರೆ ಸರಿ.

(ಈ ಹಂತದಲ್ಲಿ ಸಾಕ್ಷಿಯ ಮುಂದಿನ ಪಾಟೀ ಸವಾಲನ್ನು ಮುಂದೂಡಲಾಯಿತು).

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ